# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 522 (569)
ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ವ್ಹಿ. ಸಂಕನೂರ(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 11.12.2025
ಉತ್ತರಿಸುವವರು : ಮುಖ್ಯಮಂತ್ರಿಯವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಇಲಾಖೆಗಳಿವೆ; | ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಒಟ್ಟಾರೆ 43 ಇಲಾಖೆಗಳಿವೆ. |
| ಆ) | ಈ ಇಲಾಖೆಗಳಲ್ಲಿ ವಿವಿಧ ವೃಂದವಾರು ಮಂಜೂರಾದ ಹುದ್ದೆಗಳೆಷ್ಟು; ಅದರಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗೂ ಖಾಲಿಯಿರುವ ಹುದ್ದೆಗಳೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು) | ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವರ್ಗಾವಾರು ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಹಾಗೂ ಖಾಲಿ ಇರುವ ಹುದ್ದೆಗಳ ಇಲಾಖಾವಾರು ಮಾಹಿತಿಯನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಇ) | ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳಲು ಆರ್ಥಿಕ ಇಲಾಖೆಯು ಮಂಜೂರಾತಿ ನೀಡಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಇಲಾಖೆಗಳಲ್ಲಿ ಯಾವ ಯಾವ ವೃಂದದ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ; (ವಿವರ ನೀಡುವುದು) | ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಿಯಮಾನುಸಾರ ಅವಶ್ಯಕತೆ ಅನುಗುಣವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆಯು ಮಂಜೂರಾತಿ ನೀಡಿದ್ದು, ಸದರಿ ಹುದ್ದೆಗಳ ವರ್ಗಾವಾರು ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |
| ಈ) | ಇತ್ತೀಚೆಗೆ ನಿರುದ್ಯೋಗಿ ಪದವೀಧರರ ಸಹಸ್ರಾರು ಸಂಖ್ಯೆಯಲ್ಲಿದ್ದು, ನೇಮಕಾತಿ ಮತ್ತು ವಯೋಮಿತಿ ಹೆಚ್ಚಿಸಲು ಮುಂತಾದ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ದಿನಾಂಕ:25.09.2025 ರಂದು ಧಾರವಾಡದಲ್ಲಿ ಬೃಹತ್ ಪ್ರಮಾಣದಲ್ಲಿ ಹೋರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಹೌದು,<br>ಹೊಸದಾಗಿ ನೇಮಕಾತಿ ಮಾಡಲು ತೆಗೆದುಕೊಂಡಿರುವ ವಿವರಗಳನ್ನು **ಅನುಬಂಧ 2ರಲ್ಲಿ** ಒದಗಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 262 ಸೇನೆನಿ 2025 ದಿನಾಂಕ:29.09.2025ರಲ್ಲಿ ಈ ಆದೇಶ ಹೊರಡಿಸಿದ ದಿನಾಂಕದ ನಂತರ ಮುಂದಿನ ದಿನಾಂಕ:31.12.2027ರವರೆಗೆ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳನ್ನು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಆಯಾಯ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ ಮೂರು ವರ್ಷಗಳ ಸಡಿಲಿಕೆ ನೀಡಿ ಆದೇಶಿಸಿದ್ದು, ಸಂಬಂಧಿಸಿದ ಆದೇಶವನ್ನು **ಅನುಬಂಧ-3ರಲ್ಲಿ** ಒದಗಿಸಿದೆ. |

**ಕಡತ ಸಂಖ್ಯೆ:ಸಿಆಸುಇ 281 ರಾಸ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

ಅನುಬಂಧ - 1

## 2025-26ನೇ ಸಾಲಿನಲ್ಲಿ ಇಲಾಖಾವಾರು ಹಾಗೂ ವರ್ಗವಾರು ಮಂಜೂರಾದ, ಖಾಲಿಯಿರುವ ಹಾಗೂ ಭರ್ತಿಯಾದ ಹುದ್ದೆಗಳ ಸಂಖ್ಯೆ

| ಕ್ರ. ಸಂ | ಇಲಾಖೆ | ಮಂಜೂರಾದ ಹುದ್ದೆಗಳು | | | | | ಖಾಲಿ ಹುದ್ದೆಗಳು | | | | | ಭರ್ತಿಯಾದ ಹುದ್ದೆಗಳು | | | | |
|---|---|---|---|---|---|---|---|---|---|---|---|---|---|---|---|---|
| | | A | B | C | D | ಒಟ್ಟು | A | B | C | D | ಒಟ್ಟು | A | B | C | D | ಒಟ್ಟು |
| 1 | ಕೃಷಿ | 596 | 4609 | 3583 | 1526 | 10314 | 74 | 3336 | 2259 | 1207 | 6876 | 522 | 1273 | 1324 | 319 | 3438 |
| 2 | ಪಶುಸಂಗೋಪನೆ | 3547 | 282 | 7357 | 7367 | 18553 | 1507 | 60 | 3259 | 6194 | 11020 | 2040 | 222 | 4098 | 1173 | 7533 |
| 3 | ಹಿಂದುಳಿದ ವರ್ಗಗಳ ಕಲ್ಯಾಣ | 54 | 246 | 3936 | 11064 | 15300 | 28 | 145 | 1740 | 6612 | 8525 | 26 | 101 | 2196 | 4452 | 6775 |
| 4 | ಸಹಕಾರ | 160 | 663 | 4803 | 1402 | 7028 | 31 | 84 | 3454 | 1157 | 4726 | 129 | 579 | 1349 | 245 | 2302 |
| 5 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 1078 | 910 | 7049 | 2193 | 11230 | 347 | 263 | 3834 | 1746 | 6190 | 731 | 647 | 3215 | 447 | 5040 |
| 6 | ಇ - ಆಡಳಿತ | 46 | 25 | 6 | 0 | 77 | 45 | 25 | 3 | 0 | 73 | 1 | 0 | 3 | 0 | 4 |
| 7 | ಪರಿಸರ ಮತ್ತು ಜೀವಿಶಾಸ್ತ್ರ | 9 | 0 | 3 | 0 | 12 | 7 | 0 | 3 | 0 | 10 | 2 | 0 | 0 | 0 | 2 |
| 8 | ಇಂಧನ | 98 | 114 | 147 | 48 | 407 | 20 | 49 | 75 | 43 | 187 | 78 | 65 | 72 | 5 | 220 |
| 9 | ಆರ್ಥಿಕ | 1082 | 1322 | 12520 | 2386 | 17310 | 311 | 446 | 4871 | 2040 | 7668 | 771 | 876 | 7649 | 346 | 9642 |
| 10 | ಮೀನುಗಾರಿಕೆ | 47 | 234 | 443 | 695 | 1419 | 11 | 84 | 97 | 646 | 838 | 36 | 150 | 346 | 49 | 581 |
| 11 | ಆಹಾರ ಮತ್ತು ನಾಗರೀಕ ಸರಬರಾಜು | 63 | 181 | 1958 | 441 | 2643 | 11 | 75 | 1032 | 324 | 1442 | 52 | 106 | 926 | 117 | 1201 |
| 12 | ಅರಣ್ಯ | 369 | 875 | 10439 | 3083 | 14766 | 98 | 203 | 3979 | 2198 | 6478 | 271 | 672 | 6460 | 885 | 8288 |
| 13 | ಕೈಮಗ್ಗ ಮತ್ತು ಜವಳಿ | 14 | 6 | 51 | 11 | 82 | 3 | 2 | 31 | 8 | 44 | 11 | 4 | 20 | 3 | 38 |
| 14 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 8905 | 1790 | 45756 | 18935 | 75386 | 2522 | 1221 | 19721 | 14108 | 37572 | 6383 | 569 | 26035 | 4827 | 37814 |
| 15 | ಉನ್ನತ ಶಿಕ್ಷಣ | 12347 | 370 | 6463 | 5611 | 24791 | 4355 | 134 | 4001 | 5109 | 13599 | 7992 | 236 | 2462 | 502 | 11192 |
| 16 | ಒಳಾಡಳಿತ | 1395 | 2633 | 122405 | 3709 | 130142 | 435 | 608 | 25194 | 1951 | 28188 | 960 | 2025 | 97211 | 1758 | 101954 |
| 17 | ತೋಟಗಾರಿಕೆ | 241 | 1205 | 1001 | 3759 | 6206 | 22 | 4 | -239 | 3127 | 2914 | 219 | 1201 | 1240 | 632 | 3292 |
| 18 | ವಾರ್ತಾ | 48 | 39 | 343 | 135 | 565 | 34 | 12 | 198 | 96 | 340 | 14 | 27 | 145 | 39 | 225 |
| 19 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 11 | 27 | 26 | 11 | 75 | 6 | 21 | 23 | 11 | 61 | 5 | 6 | 3 | 0 | 14 |
| 20 | ಕನ್ನಡ ಮತ್ತು ಸಂಸ್ಕೃತಿ | 39 | 94 | 249 | 214 | 596 | 16 | 60 | 173 | 195 | 444 | 23 | 34 | 76 | 19 | 152 |
| 21 | ಕಾರ್ಮಿಕ | 785 | 150 | 2404 | 1168 | 4507 | 370 | 83 | 1212 | 1003 | 2668 | 415 | 67 | 1192 | 165 | 1839 |
| 22 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 4377 | 685 | 13921 | 7932 | 26915 | 2762 | 152 | -230 | 4975 | 7659 | 1615 | 533 | 14151 | 2957 | 19256 |
| 23 | ಭಾರಿ ನೀರಾವರಿ | 145 | 276 | 667 | 301 | 1389 | 89 | 5 | 365 | 150 | 609 | 56 | 271 | 302 | 151 | 780 |
| 24 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 122 | 109 | 302 | 107 | 640 | 59 | 89 | 159 | 87 | 394 | 63 | 20 | 143 | 20 | 246 |
| 25 | ಗಣಿ | 69 | 292 | 575 | 222 | 1158 | 14 | 128 | 319 | 195 | 656 | 55 | 164 | 256 | 27 | 502 |
| 26 | ಸಣ್ಣ ನೀರಾವರಿ | 173 | 475 | 1006 | 385 | 2039 | 111 | 113 | 483 | 162 | 869 | 62 | 362 | 523 | 223 | 1170 |
| 27 | ಅಲ್ಪಸಂಖ್ಯಾತರ ಕಲ್ಯಾಣ | 126 | 1005 | 3549 | 2406 | 7086 | 86 | 620 | 1881 | 2385 | 4972 | 40 | 385 | 1668 | 21 | 2114 |
| 28 | ಸಂಸದೀಯ ವ್ಯವಹಾರಗಳು | 137 | 131 | 873 | 456 | 1597 | 62 | 9 | 249 | 113 | 433 | 75 | 122 | 624 | 343 | 1164 |
| 29 | ಯೋಜನೆ, ಸಾಂಖ್ಯಿಕ , ವಿಜ್ಞಾನ ಮತ್ತು ತಂತ್ರಜ್ಞಾನ | 140 | 107 | 1120 | 146 | 1513 | 33 | -28 | 609 | 107 | 721 | 107 | 135 | 511 | 39 | 792 |
| 30 | ಲೋಕೋಪಯೋಗಿ | 533 | 1263 | 3064 | 1411 | 6271 | 284 | -416 | 1047 | 493 | 1408 | 249 | 1679 | 2017 | 918 | 4863 |
| 31 | ಕಂದಾಯ | 401 | 1050 | 25326 | 5593 | 32370 | 107 | 344 | 6501 | 3915 | 10867 | 294 | 706 | 18825 | 1678 | 21503 |
| 32 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 1066 | 1893 | 22919 | 2369 | 28247 | 492 | 640 | 7695 | 1677 | 10504 | 574 | 1253 | 15224 | 692 | 17743 |
| 33 | ಪರಿಶಿಷ್ಟ ಜಾತಿಗಳ ಕಲ್ಯಾಣ | 163 | 195 | 4669 | 10371 | 15398 | 68 | 63 | 1513 | 8002 | 9646 | 95 | 132 | 3156 | 2369 | 5752 |



File No. DPAR/281/RASA/2025-DPAR_POL_COORD-DPAR (Computer No. 1978355)
Generated from eOffice by B K SANDEEP, DPAR-POL-US(BKS), UNDER SECRETARY, DEPARTMENT OF PERSONNEL & ADMINISTRATIVE REFORMS on 09/12/2025 04:56 PM

## 2025-26ನೇ ಸಾಲಿನಲ್ಲಿ ಇಲಾಖಾವಾರು ಹಾಗೂ ವರ್ಗವಾರು ಮಂಜೂರಾದ, ಖಾಲಿಯಿರುವ ಹಾಗೂ ಭರ್ತಿಯಾದ ಹುದ್ದೆಗಳ ಸಂಖ್ಯೆ

| ಕ್ರ. ಸಂ. | ಇಲಾಖೆ | ಮಂಜೂರಾದ ಹುದ್ದೆಗಳು | | | | | ಖಾಲಿ ಹುದ್ದೆಗಳು | | | | | ಭರ್ತಿಯಾದ ಹುದ್ದೆಗಳು | | | | |
|---|---|---|---|---|---|---|---|---|---|---|---|---|---|---|---|---|
| | | A | B | C | D | ಒಟ್ಟು | A | B | C | D | ಒಟ್ಟು | A | B | C | D | ಒಟ್ಟು |
| 34 | ಪರಿಶಿಷ್ಟ ಪಂಗಡಗಳ ಕಲ್ಯಾಣ | 31 | 38 | 1065 | 1734 | 2868 | 12 | 17 | 761 | 1645 | 2435 | 19 | 21 | 304 | 89 | 433 |
| 35 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 2255 | 20244 | 252511 | 8493 | 283503 | 1127 | 7231 | 66895 | 4441 | 79694 | 1128 | 13013 | 185616 | 4052 | 203809 |
| 36 | ರೇಷ್ಮೆ | 86 | 495 | 3356 | 623 | 4560 | 19 | 278 | 2661 | 379 | 3337 | 67 | 217 | 695 | 244 | 1223 |
| 37 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 153 | 621 | 4656 | 1408 | 6838 | 98 | 471 | 2173 | 1268 | 4010 | 55 | 150 | 2483 | 140 | 2828 |
| 38 | ಸಣ್ಣ ಕೈಗಾರಿಕೆ | 49 | 92 | 338 | 54 | 533 | 20 | 46 | 251 | 43 | 360 | 29 | 46 | 87 | 11 | 173 |
| 39 | ಪ್ರವಾಸೋದ್ಯಮ | 44 | 58 | 260 | 169 | 531 | 21 | 26 | 201 | 138 | 386 | 23 | 32 | 59 | 31 | 145 |
| 40 | ಸಾರಿಗೆ | 84 | 371 | 1941 | 376 | 2772 | 30 | 209 | 1006 | 296 | 1541 | 54 | 162 | 935 | 80 | 1231 |
| 41 | ನಗರಾಭಿವೃದ್ಧಿ | 402 | 219 | 734 | 96 | 1451 | 268 | 55 | 522 | 69 | 914 | 134 | 164 | 212 | 27 | 537 |
| 42 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 411 | 367 | 5115 | 1109 | 7002 | 144 | 193 | 2115 | 939 | 3391 | 267 | 174 | 3000 | 170 | 3611 |
| 43 | ಯುವಜನ ಸೇವೆಗಳು | 21 | 44 | 152 | 107 | 324 | 12 | 20 | 94 | 86 | 212 | 9 | 24 | 58 | 21 | 112 |
| | **ಒಟ್ಟು** | **41922** | **45805** | **579061** | **109626** | **776414** | **16171** | **17180** | **172190** | **79340** | **284881** | **25751** | **28625** | **406871** | **30286** | **491533** |



ile No. DPAR/281/RASA/2025-DPAR_POL_COORD-DPAR (Computer No. 1978355)
ienerated from eOffice by B K SANDEEP, DPAR-POL-US(BKS), UNDER SECRETARY, DEPARTMENT OF PERSONNEL & ADMINISTRATIVE

## ಅನುಬಂಧ-2

### ಆರ್ಥಿಕ ಇಲಾಖೆಯಿಂದ ಭರ್ತಿ ಮಾಡಿಕೊಳ್ಳಲು ಮಂಜೂರಾತಿ ನೀಡಲಾಗಿರುವ ಹುದ್ದೆಗಳ ಮಾಹಿತಿ:

| ಕ್ರ. ಸಂ. | ಇಲಾಖೆ | ಎ | ಬಿ | ಸಿ | ಒಟ್ಟು |
|---|---|---|---|---|---|
| 1. | ಕೃಷಿ | 72 | 100 | 381 | 553 |
| 2. | ಪಶುಸಂಗೋಪನೆ | 22 | 0 | 9 | 31 |
| 3. | ಹಿಂದುಳಿದ ವರ್ಗಗಳ ಕಲ್ಯಾಣ | 7 | 0 | 0 | 7 |
| 4. | ಸಹಕಾರ | 0 | 10 | 170 | 180 |
| 5. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 2 | 0 | 56 | 58 |
| 6. | ಪರಿಸರ ಮತ್ತು ಜೀವಿಶಾಸ್ತ್ರ | 0 | 53 | 39 | 92 |
| 7. | ಇಂಧನ | 0 | 0 | 2400 | 2400 |
| 8. | ಆರ್ಥಿಕ | 32 | 100 | 2111 | 2243 |
| 9. | ಆಹಾರ ಮತ್ತು ನಾಗರೀಕ ಸರಬರಾಜು | 0 | 0 | 3 | 3 |
| 10. | ಕೈಮಗ್ಗ ಮತ್ತು ಜವಳಿ | 0 | 12 | 0 | 12 |
| 11. | ಆರೋಗ್ಯ ಮತ್ತು | 220 | 0 | 1505 | 1725 |
| 12. | ಉನ್ನತ ಶಿಕ್ಷಣ | 5 | 0 | 55 | 60 |
| 13. | ಒಳಾಡಳಿತ | 5 | 0 | 552 | 557 |
| 14. | ವಸತಿ | 0 | 2 | 36 | 38 |
| 15. | ಕನ್ನಡ ಮತ್ತು ಸಂಸ್ಕೃತಿ | 0 | 6 | 0 | 6 |
| 16. | ಕಾರ್ಮಿಕ | 0 | 7 | 0 | 7 |
| 17. | ಭಾರಿ ಮತ್ತು ಮಧ್ಯಮ ಕೈಗಾರಿಕೆ | 1 | 9 | 32 | 42 |
| 18. | ವೈದ್ಯಕೀಯ ಶಿಕ್ಷಣ | 147 | 5 | 181 | 333 |
| 19. | ಗಣಿ | 0 | 18 | 0 | 18 |
| 20. | ಸಣ್ಣ ನೀರಾವರಿ | 0 | 11 | 10 | 21 |
| 21. | ಅಲ್ಪಸಂಖ್ಯಾತರ ಕಲ್ಯಾಣ | 1 | 166 | 617 | 784 |
| 22. | ಕಂದಾಯ | 0 | 40 | 1310 | 1350 |
| 23. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 20 | 4 | 327 | 351 |
| 24. | ಪರಿಶಿಷ್ಟ ಜಾತಿಗಳ ಕಲ್ಯಾಣ | 10 | 7 | 875 | 892 |
| 25. | ಪರಿಶಿಷ್ಟ ಪಂಗಡಗಳ ಕಲ್ಯಾಣ | 0 | 0 | 200 | 200 |
| 26. | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 0 | 0 | 5267 | 5267 |
| 27. | ರೇಷ್ಮೆ | 2 | 4 | 9 | 15 |
| 28. | ಪ್ರವಾಸೋದ್ಯಮ | 0 | 0 | 5 | 5 |
| 29. | ಸಾರಿಗೆ | 0 | 27 | 6820 | 6847 |
| 30. | ನಗರಾಭಿವೃದ್ಧಿ | 16 | 28 | 141 | 185 |
| 31. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 0 | 10 | 4 | 14 |
| 32. | ಯುವಜನ ಸೇವೆಗಳು | 0 | 0 | 4 | 4 |
| | **ಒಟ್ಟು** | **562** | **619** | **23,119** | **24,300** |



lo. DPAR/281/RASA/2025-DPAR_POL_COORD-DPAR (Computer No. 1978355)
'ated from eOffice by B K SANDEEP, DPAR-POL-US(BKS), UNDER SECRETARY, DEPARTMENT OF PERSONNEL & ADMINISTRATIVE REFORMS (

ಅನುಬಂಧ - ೨

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಯ ಕ್ರಮವಾಗಿ ಸಡಿಲಿಸುವ ಕುರಿತು.

**ಓದಲಾಗಿದೆ:**

1. ದಿನಾಂಕ 25.11.2024ರ, ದಿನಾಂಕ 29.03.2025ರ ಮತ್ತು ದಿನಾಂಕ 11.04.2025ರ ಸರ್ಕಾರದ ಸುತ್ತೋಲೆಗಳ ಸಂಖ್ಯೆ : ಸಿಆಸುಇ 388 ಸೆನೆನಿ 2024.
2. ದಿನಾಂಕ 06.09.2025ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 249 ಸೇನೆನಿ 2025.

* * *

**ಪ್ರಸ್ತಾವನೆ:**

1. ಮೇಲೆ (1) ರಲ್ಲಿ ಓದಲಾದ ದಿನಾಂಕ 25.11.2024ರ, ದಿನಾಂಕ 29.03.2025ರ ಮತ್ತು ದಿನಾಂಕ 11.04.2025ರ ಸರ್ಕಾರದ ಸುತ್ತೋಲೆಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿಯಾಗುವವರೆಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅಥವಾ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ದಿನಾಂಕ: 28-10-2024 ರಿಂದ ಮುಂದಿನ ಆದೇಶದವರೆವಿಗೂ ಹೊರಡಿಸಬಾರದೆಂದು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ.

2. ದಿನಾಂಕ: 18.08.2025 ರಂದು ನಡೆದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ 'ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನೀಡುವ ಕುರಿತು ನಿವೃತ್ತ ನ್ಯಾಯಮೂರ್ತಿ ಡಾ: ಹೆಚ್.ಎನ್. ನಾಗಮೋಹನ್ ದಾಸ್ ರವರ ಏಕ ಸದಸ್ಯ ಆಯೋಗವು ನೀಡಿರುವ ವರದಿಯ ಬಗ್ಗೆ' ಚರ್ಚಿಸಿ ಸಚಿವ ಸಂಪುಟದಲ್ಲಿ ನಿರ್ಣಯಿಸಲಾದ 7 ಅಂಶಗಳ ಪೈಕಿ 4ನೇ ಅಂಶದಲ್ಲಿ "ಒಳಮೀಸಲಾತಿ ಕುರಿತು ಆದೇಶ ಹೊರಡಿಸಿದ ಕೂಡಲೇ, ರಾಜ್ಯ ಸಿವಿಲ್ ಸೇವೆಗಳ ಹುದ್ದೆಗಳಿಗೆ ತಡೆಹಿಡಿಯಲಾದ ನೇರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಚಿವ ಸಂಪುಟವು ನಿರ್ಧರಿಸಿತು. ಒಳ ಮೀಸಲಾತಿಗಳ ಕುರಿತು ನಿರ್ಧಾರ

ತೆಗೆದುಕೊಳ್ಳುವವರೆಗೆ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುವುದರಿಂದ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಆಯಾ ನೇಮಕಾತಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ಸಂಪುಟ ನಿರ್ಧರಿಸಿದೆ. ಸಡಿಲಿಕೆಯ ಪ್ರಮಾಣ ಮತ್ತು ಅವಧಿಯನ್ನು ನಿರ್ಧರಿಸಲು ಸಚಿವ ಸಂಪುಟವು ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಿದೆ." ಎಂದು ನಿರ್ಣಯಿಸಲಾಗಿದೆ.

3. ಅದರಂತೆ, ಮೇಲೆ (2) ರಲ್ಲಿ ಓದಲಾದ ದಿನಾಂಕ:6.09.2025ರ ಆದೇಶವನ್ನು ಹೊರಡಿಸಿದ ದಿನಾಂಕದ ನಂತರ ಮುಂದಿನ ದಿನಾಂಕ 31.12.2027 ರವರೆಗೆ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳನ್ವಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಆಯಾಯ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ (as a one-time measure) 2 ವರ್ಷಗಳ ಸಡಿಲಿಕೆ ನೀಡಿ ಆದೇಶಿಸಲಾಗಿದೆ.

4. ನಂತರದಲ್ಲಿ ಹಲವಾರು ಉದ್ಯೋಗಾಕಾಂಕ್ಷಿಗಳು, ಜನಪ್ರತಿನಿದಿಗಳು ಮತ್ತು ಸಂಘ ಸಂಸ್ಥೆಗಳು ಮನವಿ ಸಲ್ಲಿಸಿ ರಾಜ್ಯ ಸಿವಿಲ್ ಸೇವೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆಯನ್ನು ನೀಡುವಂತೆ ಕೋರಿರುತ್ತಾರೆ. ಸದರಿ ಮನವಿಗಳನ್ನು ಸರ್ಕಾರವು ಪರಿಶೀಲಿಸಿ ಒಂದು ಬಾರಿಗೆ ಮಾತ್ರ ವಯೋಮಿತಿಯಲ್ಲಿ 3 ವರ್ಷಗಳ ಸಡಿಲಿಕೆ ನೀಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 262 ಸೇನೆನಿ 2025**

**ಬೆಂಗಳೂರು, ದಿನಾಂಕ: 29.09.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲೆ (2)ರಲ್ಲಿ ಓದಲಾದ ದಿನಾಂಕ: 06.09.2025ರ ಆದೇಶವನ್ನು ಹಿಂಪಡೆದು, ಈ ಆದೇಶ ಹೊರಡಿಸಿದ ದಿನಾಂಕದ ನಂತರ ಮುಂದಿನ ದಿನಾಂಕ 31.12.2027 ರವರೆಗೆ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಹೊರಡಿಸುವ ಅಧಿಸೂಚನೆಗಳನ್ವಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ



ile No. DPAR/281/RASA/2025-DPAR_POL_COORD-DPAR (Computer No. 1978355)
ienerated from eOffice by B K SANDEEP, DPAR-POL-US(BKS), UNDER SECRETARY, DEPARTMENT OF PERSONNEL & ADMINISTRATIVE REFORMS

ಆಯಾಯ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ (as a one-time measure) 3 ವರ್ಷಗಳ ಸಡಿಲಿಕೆ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ವೀರಭದ್ರ) 29-9-2024
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 50 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-ಎ), ಕೊಠಡಿ ಸಂಖ್ಯೆ-31 ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

ಪ್ರತಿ

1. ಪ್ರಧಾನ ಮಹಾಲೇಖಪಾಲರು, (ಜಿಎಸ್ಎಸ್ಎ), (ಇ&ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
6. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
7. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
8. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
9. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು,
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್/ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
17. ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ).
18. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(*ಮುಖ ಪತ್ರದೊಂದಿಗೆ)



No. DPAR/281/RASA/2025-DPAR_POL_COORD-DPAR (Computer No. 1978355)
ıerated from eOffice by B K SANDEEP, DPAR-POL-US(BKS), UNDER SECRETARY, DEPARTMENT OF PERSONNEL & ADMINISTRATIVE REFORMS c